ವಿ-72-(94)

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ಮಂಡಿಸಿರುವ ನಿಯಮ 72 ರ ಸೂಚನಾ ಪತ್ರಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಹೇಳಿಕೆ.**

**ವಿಷಯ: ಗ್ರಾಮ ಪಂಚಾಯಿತಿಗಳು ಇಂದು ಹೆಚ್ಚು ಕಾರ್ಯೋನ್ಮುಖವಾಗಿ ಸಾರ್ವಜನಿಕರಿಗೆ ಸ್ಪಂದಿಸುವ ಕೆಲಸ ಮಾಡುತ್ತಿದೆ ಮತ್ತು ಗ್ರಾಮ ಮಟ್ಟದಲ್ಲೇ ಹತ್ತು ಹಲವು ಸಾರ್ವಜನಿಕ ಸೇವೆಗಳನ್ನು ಜನರಿಗೆ ನೀಡುತ್ತಿವೆ. ಆದ್ದರಿಂದ, ಗ್ರಾಮ ಪಂಚಾಯಿತಿಗಳನ್ನು ಇನ್ನೂ ಹೆಚ್ಚಿಗೆ ಸಧೃಡಗೊಳಿಸುವ ಮತ್ತು ಗ್ರಾಮ ಪಂಚಾಯಿತಿಗಳಿಗೆ ಬೇಕಾದ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವ ಬಗ್ಗೆ.**

----

**ಉತ್ತರ:** ಗ್ರಾಮ ಪಂಚಾಯಿತಿ ಹಂತದಲ್ಲಿ ಸರ್ಕಾರದ ವಿವಿಧ ಯೋಜನೆಗಳು/ಕಾರ್ಯಕ್ರಮಗಳಡಿ ಸೇವಾ ಸೌಲಭ್ಯಗಳನ್ನು ಹಾಗೂ ಇತರೆ ಇಲಾಖೆಗೆ ಸಂಬಂಧಿಸಿದ ಸೇವೆಗಳನ್ನು ನಾಗರೀಕರಿಗೆ ನೀಡಲಾಗುತ್ತಿದೆ. ಈ ಜವಾಬ್ದಾರಿಗಳನ್ನು ನಿರ್ವಹಿಸಲು ಅಗತ್ಯವಾಗಿರುವ ಮೂಲ ಸೌಲಭ್ಯಗಳನ್ನು ಒದಗಿಸಿಕೊಳ್ಳಲು ಸರ್ಕಾರ ಕ್ರಮವಹಿಸುತ್ತಿದೆ.

ನಾಗರೀಕರು ಗ್ರಾಮ ಪಂಚಾಯಿತಿಗಳಿಗೆ ಆಗಮಿಸಿದಾಗ ಅವರ ಕುಂದು ಕೊರತೆಗಳನ್ನು ಆಲಿಸಲು/ದಾಖಲಿಸಿಕೊಳ್ಳಲು ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಿಸಲಾಗಿದೆ. ನಾಗರೀಕರು ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಮಾಡಿಕೊಡಲಾಗಿದೆ.

ಇತ್ತೀಚಿನ ಸರ್ಕಾರದ ನೀತಿಯಂತೆ ಆನ್‌ಲೈನ್‌ನಲ್ಲಿ ವಿವಿಧ ಸೇವಾ ಪ್ರಮಾಣ ಪತ್ರಗಳು, ಇ-ಸ್ವತ್ತು ನಿರ್ವಹಣೆ, ಫಲಾನುಭವಿಗಳ ಆಯ್ಕೆ, ಗ್ರಾಮ ಪಂಚಾಯಿತಿ ಸಭೆಗಳು, ಗ್ರಾಮ ಸಭೆಗಳು ಮತ್ತು ವಾರ್ಡ್ ಸಭೆಗಳ ದಾಖಲೀಕರಣ ಗಣಕಯಂತ್ರದ ಮೂಲಕ ದಾಖಲಿಸುತ್ತಿರುವುದರಿಂದ ಈ ಕಾರ್ಯನಿರ್ವಹಣೆಗೆ ಅಗತ್ಯವಾಗಿರುವ ಗಣಕಯಂತ್ರದ ಪರಿಕರಗಳು ಮತ್ತು ಅಂತರ್‌ಜಾಲ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಈಗಗಲೇ ಕ್ರಮವಹಿಸಿರುತ್ತದೆ.

**ಸಂಖ್ಯೆ: ಗ್ರಾಅಪ 463 ಗ್ರಾಪಂಅ 2021**

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.